



[ಶ್ರೀ ಪುರಂದರದಾಸರ ಸಾಮಾಜಿಕ ಕಳಕಳಿಯ ಬಗ್ಗೆ ಗಮನ ಸೆಳೆದಿರುವ ಲೇಖಕಿಯು ಹಲವಾರು ವ್ಯಕ್ತಿಗಳ ಜೀವನದ ಮಹಿಮೆಯ ಪರಿಚಯವನ್ನು ಕನ್ನಡ ಹಾಗೂ ಇಂಗ್ಲಿಷ್ ಪತ್ರಿಕೆಗಳಲ್ಲಿ ಮಾಡಿಕೊಟ್ಟಿರುತ್ತಾರೆ. ನಿರ್ವಹಣೆ ಹಾಗೂ ಆರ್ಥಿಕ ರಂಗದ ಬಗ್ಗೆಯೂ ಈಕೆ ಪುಸ್ತಕಗಳನ್ನು ಬರೆದಿದ್ದಾರೆ. ಲೇಖಕಿಯು ಬೆಂಗಳೂರಿನಲ್ಲಿ ನೆಲೆಸಿದ್ದಾರೆ.]

## ದಾಸರೆಂದರೆ ಪುರಂದರದಾಸರಯ್ಯ

ಜ್ಞಾನ-ವೈರಾಗ್ಯ-ಸಂಪನ್ನಂ
ಭಕ್ತಿಮಾರ್ಗ-ಪ್ರವರ್ತಕಂ।
ಪುರಂದರಗುರುಂ ವಂದೇ
ದಾಸಶ್ರೇಷ್ಠಂ ದಯಾನಿಧಿಂ॥



ಪುಷ್ಯ ಬಹುಳ ಅಮಾವಾಸ್ಯೆ (ಜನವರಿ ೧೯, ೨೦೦೭) ಶ್ರೀ ಪುರಂದರದಾಸರ ಪುಣ್ಯದಿನ. ಅಂದು ಅನೇಕರು ಅವರು ರಚಿಸಿರುವ ದೇವರನಾಮಗಳನ್ನು ಭಕ್ತಿಯಿಂದ ಹಾಡಿ ಅವರನ್ನು ಸ್ಮರಿಸಿ, ಪೂಜಿಸುತ್ತಾರೆ.

ಹರಿದಾಸ ಪರಂಪರೆಯಲ್ಲಿ ಅಗ್ರಗಣ್ಯರೆನಿಸಿದ ಶ್ರೀ ಪುರಂದರದಾಸರು ಜನಸಾಮಾನ್ಯರಿಗೆ ಭಕ್ತಿಮಾರ್ಗವನ್ನೂ, ಭಾಗವತ ಧರ್ಮವನ್ನೂ ಯಶಸ್ವಿಯಾಗಿ ಬೋಧಿಸಿದವರು. ಉಪ್ಪರಿಗೆಯ ಮನೆಯನ್ನೂ, ಕೊಪ್ಪರಿಗೆಯ ಹಣವನ್ನೂ ತೊರೆದು, ಕಾಲಿಗೆ ಗೆಜ್ಜೆ ಕಟ್ಟಿ, ಕೈಯ್ಯಲ್ಲಿ ತಂಬೂರಿ ಹಿಡಿದು 'ಹರಿದಾಸ'ರಾದ ಮೇಲೆ ಅವರು ತಾವು ಕಂಡುಕೊಂಡ ತತ್ವದ ಪ್ರಚಾರಕ್ಕಾಗಿ ತಿಳಿಗನ್ನಡದಲ್ಲಿ ದೇವರನಾಮಗಳನ್ನು ರಚಿಸಿ, ಎಲ್ಲರ ನಾಲಿಗೆಯ ಮೇಲೆ ನಲಿದಾಡುವಂತೆ ಮಾಡಿ, ಕನ್ನಡ ಸಾಹಿತ್ಯ ಹಾಗೂ ಸಂಗೀತವನ್ನು ಸಮೃದ್ಧಗೊಳಿಸಿದರು. ಆದರೆ ಇದೆಲ್ಲಕ್ಕಿಂತ ಹೆಚ್ಚಾಗಿ, ಇಂದಿನ ಸಂದರ್ಭದಲ್ಲಿ ಶ್ರೀ ಪುರಂದರದಾಸರು ನಮಗೆ ಮುಖ್ಯವಾಗಿ ಕಂಡುಬರುವುದು ಒಬ್ಬ ಸಮಾಜೋದ್ಧಾರಕರಾಗಿ. ಇವರು ತಮ್ಮ ಸುತ್ತಲಿನ ಪರಿಸರ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ಅತ್ಯಂತ ಸೂಕ್ಷ್ಮವಾಗಿ ಸ್ಪಂದಿಸಿ, ವ್ಯಾವಹಾರಿಕ ಬದುಕಿನ ಚೌಕಟ್ಟಿನಲ್ಲಿಯೇ ಪರಿಹಾರಗಳನ್ನು ಸೂಚಿಸಿದರು. 'ಮಧುಕರ ವೃತ್ತಿ'ಯನ್ನು ಸ್ವೀಕರಿಸಿ, ಊರೂರು, ಕೇರಿ-ಕೇರಿಗಳಲ್ಲಿ ತಿರುಗಿ, ಸಮಾಜದ ಓರೆ-ಕೋರೆಗಳನ್ನು ಗಮನಿಸಿ, ತಿದ್ದಲು ಪ್ರಯತ್ನಿಸಿದರು. ತಮ್ಮ ಅನುಕಂಪವನ್ನೂ, ಅಪಾರವಾದ ಪ್ರೀತಿಯನ್ನೂ, ಅನುಭವವನ್ನೂ ಧಾರೆಯೆರೆದು, ಭಗವಂತನನ್ನು ನಿತ್ಯ ಜೀವನದಲ್ಲಿ ನಿಲ್ಲಿಸಿಕೊಂಡು, ನಾಲ್ಕು ಜನರ ನಡುವೆ ಹೇಗೆ ಬಾಳಬೇಕೆಂದು ಎಲ್ಲರಿಗೂ ಅರ್ಥವಾಗುವ ಭಾಷೆಯಲ್ಲಿ, ಶೈಲಿಯಲ್ಲಿ ಬೋಧಿಸಿದರು. ಆತ್ಮೋದ್ಧಾರ ಹಾಗೂ ಲೋಕೋದ್ಧಾರಗಳೆರಡಕ್ಕೂ ಅಪರಿಮಿತವಾಗಿ ಶ್ರಮಿಸಿ 'ದಾಸ ಶ್ರೇಷ್ಠ'ರೆನಿಸಿದರು.

### ಹಿನ್ನೆಲೆ

ಪುರಂದರದಾಸರ ಜೀವಿತಕಾಲ ೧೪೮೪ರಿಂದ ೧೫೬೪ರವರೆಗೆ ಎಂಬ ಸ್ಥೂಲವಾದ ನಂಬಿಕೆ ಇದೆ. ಚರಿತ್ರೆಯ ಪುಟಗಳನ್ನು ತಿರುವಿದಾಗ, ಇದು ನಮ್ಮ ನಾಡಿನ ಧಾರ್ಮಿಕ ಚಿಂತನೆ ಹಾಗೂ ಸಾಮಾಜಿಕ ವ್ಯವಸ್ಥೆಗಳು ಒಂದು ಘಟ್ಟದಿಂದ ಇನ್ನೊಂದು ಘಟ್ಟ ಮುಟ್ಟಿದ ಪರ್ವಕಾಲ ಎಂದು ತಿಳಿದು ಬರುತ್ತದೆ. ಜನಜೀವನದ ಮೇಲೆ ವಿವಿಧ ಮತ-ಧರ್ಮಗಳು ತಮ್ಮ ಪ್ರಭಾವವನ್ನು ಬೀರತೊಡಗಿದ್ದು, ಸಾಮಾಜಿಕ ವ್ಯವಸ್ಥೆ

ಹೆಚ್ಚು, ಹೆಚ್ಚು ಸಂಕೀರ್ಣವಾಗುತ್ತಿತ್ತು. ಉತ್ತರ ಭಾರತದಲ್ಲಿ ಮೊಘಲ್ ಸಾಮ್ರಾಜ್ಯವಿದ್ದರೆ, ದಕ್ಷಿಣದಲ್ಲಿ ವಿಜಯನಗರದ ಅರಸರು ಹಿಂದೂ ಸಮಾಜದ ಅಭ್ಯುದಯಕ್ಕಾಗಿ ಶ್ರಮಿಸುತ್ತಿದ್ದರು. ಈ ಸಂಧಿಕಾಲದಲ್ಲಿ, ದೇಶದ ಬೇರೆ ಬೇರೆ ಭಾಗಗಳಲ್ಲಿ ಹಲವಾರು ಹಿರಿಯ ಚೇತನಗಳು ಕಾಣಿಸಿಕೊಂಡವು. ಇವರಲ್ಲಿ ರಮಾನಂದರು, ಕಬೀರ್‌ದಾಸ್, ಮೀರಾಬಾಯಿ, ಗುರು ನಾನಕ್, ಕೃಷ್ಣ ಚೈತನ್ಯಪ್ರಭು, ನಾಮದೇವ, ತುಳಸೀದಾಸ್, ಸೂರದಾಸರಂತಹ ಸಂತಶ್ರೇಷ್ಠರು ಸೇರಿದ್ದರು. ಆಗಿನ ಸಾಮಾಜಿಕ ಪರಿಸ್ಥಿತಿಗೆ ಒಂದು ಹೊಸ ತಿರುವು ನೀಡಿ, ಜನ ಜಾಗೃತಿಯನ್ನು ಮೂಡಿಸುವ ಅಗತ್ಯವನ್ನು ಇವರೆಲ್ಲ ಮನಗಂಡರು. ಹೀಗೆ 'ಭಕ್ತಿ ಪಂಥ' ಹುಟ್ಟಿಕೊಂಡಿತು; ಜ್ಞಾನ ಮಾರ್ಗ, ಕರ್ಮಮಾರ್ಗಗಳನ್ನು ಮೀರಿ ಬೆಳೆಯಿತು. ಸಮಾಜದಲ್ಲಿ ಮೌಲ್ಯಗಳನ್ನು ರೂಢಿಗೆ ತಂದು ಧಾರ್ಮಿಕ ಜೀವನಕ್ಕೆ ಪ್ರಾಧಾನ್ಯತೆಯನ್ನು ನೀಡುತ್ತ ಜನಸಾಮಾನ್ಯರ ಮನಸ್ಸಿನಲ್ಲಿ ನೆಲೆಸಿದ್ದ ಭೀತಿ, ಆತಂಕಗಳನ್ನು ಹೋಗಲಾಡಿಸಿ ಭರವಸೆಯನ್ನು ನೀಡುವಲ್ಲಿ ಈ ಸಂತರು ಸಫಲರಾದರು.

ಕರ್ನಾಟಕದಲ್ಲಿ ಈ ಭಕ್ತಿಮಾರ್ಗವನ್ನು ಸಾರಲು 'ಹರಿದಾಸ'ರ ಪರಂಪರೆ ಆರಂಭವಾಯಿತು. ಇವರಿಗೆ ಮುಂಚೆ ಬಂದಿದ್ದ ಜೈನರು ಹಾಗೂ ಶಿವಶರಣರು ಕೂಡ ತಮ್ಮ ತತ್ವ ಪ್ರಚಾರಕ್ಕೆ ಪೂರಕವಾಗಿ ಸಾಮಾನ್ಯರಿಗೆ ನಿಲುಕುವಂಥ ಸಾಹಿತ್ಯ ಕೃಷಿಯನ್ನು ನಡೆಸಿದ್ದರು. ಈಗ ಹರಿದಾಸರು, ತತ್ವಜ್ಞಾನ ಎಂಬುದು ಕೇವಲ ಪಂಡಿತ ವರ್ಗಕ್ಕೆ ಮೀಸಲಿಟ್ಟ ವಿಷಯವಾಗಿ ಉಳಿಯದೆ, ಸರ್ವರಿಗೂ ನಿಲುಕುವಂತಿರಬೇಕು ಎಂದು ಸಾರಿ, ತಾಯ್ನುಡಿಯಲ್ಲೇ ಕೀರ್ತನೆಗಳನ್ನು ರಚಿಸಿ, ಭಕ್ತಿಯ ಹೊನಲನ್ನೇ ಹರಿಸಿದರು. ಹೀಗೆ ಸಾಮಾನ್ಯ ಜನರು ಆಧ್ಯಾತ್ಮಿಕತೆ ಹಾಗೂ ನೈತಿಕತೆ ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಹೊಸ ಮಾರ್ಗವನ್ನು ನಿರೂಪಿಸಿದರು. ಜೊತೆಜೊತೆಗೆ ನಾಡಿನ ಸಂಗೀತ-ಸಾಹಿತ್ಯ-ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದರು.

ಹರಿದಾಸ ಸಾಹಿತ್ಯದ ಹರಿಕಾರರೆನಿಸಿದವರು ಶ್ರೀಪಾದ ರಾಜರು. ಇವರ ಶಿಷ್ಯರಾದ ವ್ಯಾಸತೀರ್ಥರು, ಗುರುಗಳು ಹಾಕಿಕೊಟ್ಟ ಬುನಾದಿಯ ಮೇಲೆ ದೊಡ್ಡ ಕಟ್ಟಡವನ್ನೇ ನಿರ್ಮಿಸಿದರು. ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿ, ಕರ್ಮಠರಾದ ಜನರಿಗೆ ಭಕ್ತಿಯ ಮಾರ್ಗವನ್ನು ಮನಗಾಣಿಸಿದರು, 'ದಾಸಪಂಥ'ಕ್ಕೆ ದಾರಿ ಮಾಡಿಕೊಟ್ಟರು. ವ್ಯಾಸರಾಯರ ಶಿಷ್ಯರಾಗಿ ಪುರಂದರದಾಸರು, ಕನಕದಾಸರು, ವಾದಿರಾಜರು ಮುಂತಾದವರು ಅತ್ಯುತ್ತಮ ಕೊಡುಗೆ ನೀಡಿ ದಾಸಸಾಹಿತ್ಯವನ್ನು ಸಂಪನ್ನಗೊಳಿಸಿದರು. ಮುಂದೆ ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು ಮುಂತಾದವರು ಈ ಪರಂಪರೆಯಲ್ಲಿ ಬಂದು ಹೆಸರು ಗಳಿಸಿದರು. ಇವರೆಲ್ಲರ ಪೈಕಿ, ಧರ್ಮ ಹಾಗೂ ಭಗವದ್ಭಕ್ತಿಯ ಚೌಕಟ್ಟಿನಲ್ಲಿ ಕ್ರಿಯಾತ್ಮಕವಾಗಿ ಸಮಾಜದ ಏಳಿಗೆಗೆ ವಿಶಿಷ್ಟ ರೀತಿಯಲ್ಲಿ ಶ್ರಮಿಸಿ, ಜನಮನವನ್ನು ಗೆದ್ದು ಸರ್ವಮಾನ್ಯರೆನಿಸಿದವರು ಶ್ರೀ ಪುರಂದರದಾಸರು ಎಂದರೆ ಬಹುಶಃ ತಪ್ಪಾಗಲಾರದು.

## ಸಾಮಾಜಿಕ ಪ್ರಸಕ್ತಿ

ಮೌಲ್ಯಾಧಾರಿತ ಸಮಾಜದ ನಿರ್ಮಾಣಕ್ಕೆ ಪಣತೊಟ್ಟ ಹರಿದಾಸರ ಸಾಮಾಜಿಕ ಕಳಕಳಿ ಅನನ್ಯವಾದುದು. ಹರಿದಾಸರು ವಿರಕ್ತರಾದರೂ ಸಂಸಾರವನ್ನು ಬಿಟ್ಟವರಲ್ಲ. ಏಕೆಂದರೆ ಅವರಿಗೆ ಜನರ ಒಲವುಗಳನ್ನು ತಿದ್ದಿ, ವ್ಯಕ್ತಿಜೀವನದಲ್ಲಿ ಸದಾಚಾರ-ನೀತಿ-ಧರ್ಮಗಳನ್ನು ನೆಲೆಗೊಳಿಸುವ ಒಂದು ಕರ್ತವ್ಯಪ್ರಜ್ಞೆ ಇತ್ತು. ಹರಿದಾಸ ಪಂಥದ ಕೇಂದ್ರ ಬಿಂದು ಎನಿಸಿದ್ದ ಶ್ರೀ ಪುರಂದರದಾಸರು ಕೂಡ ತಮ್ಮ ಪತ್ನಿಯ "ಮೂಗುತಿಯ ಮಹಿಮೆ"ಯ ಪ್ರಸಂಗದ ನಂತರ, ಹಣದ ಹಂಬಲ ತೊರೆದು ಹರಿಸೇವೆಗಾಗಿ ಬದುಕನ್ನು ಮುಡಿಪಾಗಿಟ್ಟಿದ್ದರು. ಅವರು ಊರೊಳಗೆ ನೆರೆ-ಹೊರೆಯವರ ಮಧ್ಯದಲ್ಲಿ ಬದುಕಿ, ಗೃಹಸ್ಥರಾಗಿದ್ದುಕೊಂಡು ಉಂಛವೃತ್ತಿಯನ್ನು ಹಿಡಿದರು. ಜನರ ಓರೆ-ಕೋರೆಗಳನ್ನು, ಇಂದು ನಾವು ಅನಾಗರಿಕವೆಂದು ಕರೆಯುವ ಅನೇಕ ಸಾಮಾಜಿಕ ಪಿಡುಗುಗಳನ್ನು ಗಮನಿಸಿ, ಖಂಡಿಸಿ ತಿದ್ದಲು ಪ್ರಯತ್ನಿಸಿದರು. ಸ್ತ್ರೀ-ಪುರುಷರ ಅಸಮಾನತೆ, ಜಾತಿ-ಮತಗಳ ವೈಷಮ್ಯ, ಮನುಷ್ಯ ಸ್ವಭಾವದ ದೌರ್ಬಲ್ಯಗಳನ್ನು ವಿಶ್ಲೇಷಿಸಿ ಪರಿಹಾರಗಳನ್ನು ಸೂಚಿಸಿದರು. ದಾಸರ ದೃಷ್ಟಿಯಲ್ಲಿ ಸ್ತ್ರೀಪುರುಷರೆಂಬ ಭೇದ ಭಾವ ಇರಲಿಲ್ಲ. ಆಚಾರವಿಚಾರಗಳಲ್ಲಿ ಇಬ್ಬರಿಗೂ ಸಮಾನ ಸ್ಥಾನಮಾನ. ಇಬ್ಬರೂ ನೀತಿ ಮಾರ್ಗದಲ್ಲಿ ನಡೆಯಬೇಕು—"ಪ್ರೀತಿಯಿಲ್ಲದ ಪತಿಯ ಕಂಡು ಹಿಗ್ಗಬಾರದು, ಜಾರತ್ವ ಮಾಡುವ ಪತ್ನಿಯ ಕೂಡ ಅಳಬಾರದು.." ಹಾಗೆಯೇ "ಮುತ್ತೈದೆ ಭಾಗ್ಯ"ವನ್ನು ಸೂಚಿಸುವುದು ಬಂಗಾರದ ಒಡವೆಗಳಲ್ಲ, ಆಯಾ ಆಭರಣಗಳಿಗೆ ಅನುಗುಣವಾದ ಸದ್ಗುಣಗಳು ಎಂದರು. ವರ್ಣಾಶ್ರಮದ ತಾರತಮ್ಯದ ಕಡೆಯೂ ದಾಸರ ಗಮನ ಹರಿದಿತ್ತು. ಅವರು ಈ ಸಮಸ್ಯೆಯನ್ನು ತಮ್ಮದೇ ಆದ ರೀತಿಯಲ್ಲಿ ಮಾರ್ಮಿಕವಾಗಿ ಭೇದಿಸಲೆತ್ನಿಸಿದರು. ಅವರ ದೃಷ್ಟಿಯಲ್ಲಿ 'ಹೊಲೆಯರು' ಒಂದು ಪ್ರತ್ಯೇಕ ಜಾತಿಯಲ್ಲ; ಅನಾಚಾರವನ್ನು ಬೆಳೆಸಿಕೊಂಡವರೇ ಹೊಲೆಯರು. ಅಂತೆಯೇ ಅವರು "ಹೊಲೆಯ ಹೊರಗಿಹನೆ, ಊರೊಳಗಿಲ್ಲವೇ?" "ತನುವಿನಾ ಕೋಪ ಹೊಲೆಯಲ್ಲವೇ?" ಎಂದು ಮಡಿವಂತರೆಂದು ಭ್ರಮಿಸಿದ್ದ ಮೇಲ್ಜಾತಿಯವರನ್ನು ಪ್ರಶ್ನಿಸಿದರು.

ಇದೇ ರೀತಿ ಪುರಂದರದಾಸರು, ಮನುಷ್ಯಸ್ವಭಾವದ ಗುಣ-ಲಕ್ಷಣಗಳನ್ನು, 'ನೀತಿ-ಅನೀತಿ' 'ದುರ್ಜನರ ಸಂಗ' 'ಕೆಟ್ಟವರ ಸ್ವಭಾವ' ಹಾಗೂ 'ದೈನ್ಯತೆಯ ಬದುಕಿನ ಕಾಠಿಣ್ಯ' ಗಳನ್ನು ತಮ್ಮ ಕೃತಿಗಳಲ್ಲಿ ಅತ್ಯಂತ ಸಹಜವಾಗಿ ಬಿಂಬಿಸಿದ್ದಾರೆ. 'ಭ್ರಷ್ಟಗುಣ'ಗಳಿಂದ ಮುಕ್ತರಾಗಿ, ಅನುಸರಿಸಬೇಕಾದ ಜೀವನಸೂತ್ರವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ದೇವರಲ್ಲಿ ಭಕ್ತಿ, ಧರ್ಮಾಚರಣೆ, ದಾನಶೀಲತೆ, ಕಾರ್ಯಶ್ರದ್ಧೆ, ನಯ-ವಿನಯ-ಸೌಜನ್ಯ, ಗುರುಹಿರಿಯರಲ್ಲಿ ಗೌರವ, ಸಜ್ಜನರ ಸ್ನೇಹ ಹಾಗೂ ದೊರಕಿದಷ್ಟರಲ್ಲಿ ಸುಖಿಸುವ ಸಂತೃಪ್ತ ಮನೋಭಾವ, ಇಂಥ ಸಿದ್ಧಿ-ಸಾಧನೆಗಳಿಗೆ ಪೂರಕವಾದ ಸದಾಚಾರ ಪದ್ಧತಿಗಳನ್ನೂ ವಿವರವಾಗಿ ತಿಳಿಹೇಳಿದ್ದಾರೆ. ಸ್ನಾನಾದಿ ಆಹ್ನಿಕಗಳು, ಜಪ-ತಪ-ಸಂಧ್ಯೆಗಳು ಬಹಳ ಮುಖ್ಯವಾದರೂ ಹಬ್ಬ-ಹರಿದಿನ-ಉಪವಾಸದ ಹೆಸರಿನಲ್ಲಿ ಡಂಭಾಚಾರ, ಮೂಢ ನಂಬಿಕೆ, ಸಲ್ಲದು. "ಸತ್ಯವೆಂಬುದೇ ಸ್ನಾನ", "ಧರ್ಮವೇ ಜಯವೆಂಬ ದಿವ್ಯಮಂತ್ರ" ಎಂಬುದು ದಾಸ ವಾಣಿ. ಹೀಗೆ ಬೋಧಿಸುವಾಗ ದಾಸರು ನಮ್ಮ ಸಂಪದ್ಭರಿತ ನಾಡುನುಡಿಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.

ಪರಮಾತ್ಮನನ್ನು ಸ್ತುತಿಸುವಾಗ ಹಣ್ಣು-ಕಾಯಿಗಳ, ಬೇಳೆ-ಕಾಳುಗಳ ಪಟ್ಟಿಯನ್ನೇ ನೀಡಿದ್ದಾರೆ. ರಾಗಿ, ಬತ್ತ, ಪಾಯಸ, ಕಲ್ಲುಸಕ್ಕರೆ ಎಲ್ಲದರಲ್ಲಿ ಹರಿಯನ್ನು ಕಂಡು, ಕಾಣಿಸಿ, ಕುಣಿದಾಡಿದ್ದಾರೆ. ಭಗವಂತನ ನಾಮಗಳಿಗೆ ವಿವಿಧ ಮಾತ್ರೆಗಳನ್ನು ಹೊಂದಿಸಿ, ಹೋಲಿಸಿ ಕೃತಿಗಳನ್ನು ರಚಿಸಿದ್ದಾರೆ. ತುಳಸಿಯ ಮಹತ್ವವನ್ನು ಕೊಂಡಾಡಿದ್ದಾರೆ. ದಾಸಸಾಹಿತ್ಯದಲ್ಲಿ ನಮ್ಮ ಕೃಷಿವಿಜ್ಞಾನ, ವೈದ್ಯವಿಜ್ಞಾನ, ಮನಶ್ಶಾಸ್ತ್ರ, ಅರ್ಥಶಾಸ್ತ್ರ ಮುಂತಾದ ವಿಷಯಗಳೆಲ್ಲ ಅಡಕವಾಗಿದೆ ಎಂದರೆ ಅನೇಕರಿಗೆ ಆಶ್ಚರ್ಯವಾಗಬಹುದು. ಶ್ರೀ ಪುರಂದರದಾಸರ ಲೋಕಜ್ಞಾನದ ಆಳ-ವಿಸ್ತಾರ ಅಂಥದ್ದು.

ದಾಸರಿಗೆ ಕೃತಿಗಳ ರಚನೆಯಲ್ಲಿ ವಿಷಯದ ಕೊರತೆ ಇರಲಿಲ್ಲ. ರಾಮಾಯಣ-ಭಾರತ ಪುರಾಣ ಪ್ರಸಂಗಗಳು, ಕೃಷ್ಣಪ್ರೀತಿ, ಇವುಗಳ ಜೊತೆಗೆ ದಿನನಿತ್ಯದ ಓಡಾಟ ಒಡನಾಟಗಳಲ್ಲಿ ಪ್ರತ್ಯಕ್ಷವಾಗಿ ಕಂಡುಂಡ ಅನುಭವಗಳನ್ನು ಕೂಡ ಬಳಸಿಕೊಳ್ಳುತ್ತಿದ್ದರು. ವಸ್ತು ಎಷ್ಟೇ ಚಿಕ್ಕದಾಗಿದ್ದರೂ, ತೀರ ಸಾಮಾನ್ಯವೆನಿಸಿದ್ದರೂ, ಅವರ ಕೈಯಲ್ಲಿ ಅದಕ್ಕೆ ಒಂದು ಮಹತ್ವ ಬರುತ್ತಿತ್ತು. ದಾಸರ ಹಲವು ರಚನೆಗಳು ಸಂದರ್ಭ ಸ್ಫೂರ್ತಿಯಿಂದ ಹೊಮ್ಮಿದ್ದರೆ, ಮತ್ತೆ ಕೆಲವು, ಭಕ್ತಿಯ ಆವೇಶ, ಹುಮ್ಮಸ್ಸು ಅಥವಾ ದುಗುಡದಿಂದಲೂ ಮೈತಳೆದಿರಬಹುದು. ಇದರಿಂದಾಗಿ ನಾವು ಆಡುಭಾಷೆಯ ಚೌಕಟ್ಟಿನೊಳಗೆ ಹಾಸ್ಯ, ವಿಡಂಬನೆ, ಆಧ್ಯಾತ್ಮಿಕ ಸ್ವಾರಸ್ಯ, ವಿನೀತ ಭಾವ, ಭಕ್ತಿಯ ಪರಾಕಾಷ್ಠೆ, ಭಜನೆಗೆ ಹೊಂದುವ ಪ್ರಾಸ, ಉಪಮಾಲಂಕಾರಗಳು, ಶ್ಲೇಷೆ—ಇವೆಲ್ಲವನ್ನೂ ಕಾಣಬಹುದು.

ದಾಸಶ್ರೇಷ್ಠರು

ಇಂದು ನಾವು ನಮ್ಮ ಸಮಾಜಕ್ಕೆ ಅಂಟಿಕೊಂಡಿರುವ ಅನೇಕ ಜಾಡ್ಯಗಳ ವಿರುದ್ಧ ಹೋರಾಡಲು ಚಳವಳಿಗಳನ್ನು ಸಂಘಟಿಸುತ್ತೇವೆ. ಮಾಧ್ಯಮಗಳನ್ನು ಬಳಸುತ್ತೇವೆ. ಆದರೆ ಯಾವ ಸಂಘಟನೆ, ಪ್ರಚಾರವನ್ನೂ ಬಯಸದೆ ಪುರಂದರ ದಾಸರು ನೂರಾರು ವರ್ಷಗಳ ಹಿಂದೆಯೇ ಈ ಕೆಲಸ ಮಾಡಿದರು. ಅಂಜದೆ, ಅಳುಕದೆ ಸಮಾಜದ ಹುಳುಕುಗಳನ್ನು ತೆರೆದಿಟ್ಟರು. ದಾಸರ ಸಾಮಾಜಿಕ ಪ್ರಜ್ಞೆಯಲ್ಲಿ ಇನ್ನೂ ಒಂದು ದೊಡ್ಡ ಗುಣವನ್ನು ನಾವು ಗುರುತಿಸಬಹುದು, ಅದು ಬದುಕಿನ ಬಗ್ಗೆ ಅವರಿಗೆ ಇದ್ದ ಗಾಢವಾದ ಪ್ರೀತಿ. ಮಾನವ ಜನ್ಮದ ಘನತೆಯನ್ನು ನಮ್ಮ ಸಮಾಜದ ಜನ ಉಳಿಸಿಕೊಂಡು ಬಾಳಬೇಕೆಂಬುದು ಅವರ ಆಶಯವಾಗಿತ್ತು. ಅಂತೆಯೇ ದಾಸರು "ಮಾನವಜನ್ಮ ದೊಡ್ಡದು", "ಸಂಸಾರವೆಂಬಂಥ ಭಾಗ್ಯವಿರಲಿ" ಎಂದು ಹಾಡಿ ಹೊಗಳಿದರು. "ಈಸಬೇಕು, ಇದ್ದು ಜಯಿಸಬೇಕು" ಎಂದು ಒತ್ತಿ ಹೇಳಿದರು. ಹೀಗೆ ತಮ್ಮ ತನು-ಮನ-ಧನಗಳನ್ನು ಇಡೀ ಮನುಕುಲದ ಕಲ್ಯಾಣಕ್ಕಾಗಿ ಮುಡಿಪಾಗಿಟ್ಟು ತುಂಬು ಬಾಳ್ವೆ ನಡೆಸಿದ ಶ್ರೀ ಪುರಂದರ ದಾಸರು ರಕ್ತಾಕ್ಷಿ ಸಂವತ್ಸರದ ಪುಷ್ಯ ಬಹುಳ ಅಮಾವಾಸ್ಯೆಯಂದು (ಕ್ರಿಸ್ತಾಬ್ದ ೧೫೬೪) ಪ್ರಭುಪಾದವನ್ನು ಸೇರಿದರು.

ಶ್ರೀ ಪುರಂದರದಾಸರ ವ್ಯಕ್ತಿತ್ವದ ಹಿರಿಮೆ ಹಾಗೂ ಸಾಧನೆಯ ಮುಖಗಳನ್ನು ಸಮಗ್ರವಾಗಿ ಸೆರೆಹಿಡಿದು ಪರಿಚಯಿಸುವುದು ಸುಲಭದ ಕೆಲಸವಲ್ಲ. ಅವರ ವ್ಯಕ್ತಿತ್ವ ಹಾಗೂ ವಾಙ್ಮಯ ಅಂಥವು. ಅಂತೆಯೇ ಅವರ ಗುರುಗಳಾಗಿದ್ದ ವ್ಯಾಸತೀರ್ಥರು, "ದಾಸರೆಂದರೆ ಪುರಂದರ ದಾಸರಯ್ಯ" ಎಂದು ಹಾಡಿ, ಅವರ ಸಮಗ್ರ ರಚನೆಗಳನ್ನು 'ಪುರಂದರೋಪನಿಷತ್' ಎಂದು ಕರೆದರು. ಇಂಥ "ಸುಸಂಸ್ಕೃತ ಸಂತ"ರ ಕೊಡುಗೆಯನ್ನು ಸ್ಮರಿಸುವುದರ ಜೊತೆಗೆ ಅವರು ಉಪದೇಶಿಸಿರುವ ಜೀವನ ವಿಧಾನ, ಮನೋವೃತ್ತಿ ಹಾಗೂ ಮೌಲ್ಯಗಳನ್ನು ಕೆಲಮಟ್ಟಿಗಾದರೂ ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ನಡೆಸಿದರೆ, ಇಂದಿನ ನಿತ್ಯ ಜೀವನದಲ್ಲಿ ನಮ್ಮ ನೆಮ್ಮದಿಯನ್ನು ಕೆಡಿಸುವ ಅನೇಕ ಸನ್ನಿವೇಶಗಳು ಮರೆಯಾಗಿ ಬದುಕು ಸಹ್ಯವಾದೀತು. ಏಕೆಂದರೆ ಶ್ರೀ ಪುರಂದರದಾಸರು ಒಬ್ಬ ವ್ಯಕ್ತಿಯಾಗಿರಲಿಲ್ಲ; ಸಮಾಜದ ಕನ್ನಡಿಯಾಗಿದ್ದರು. ಅವರು ನಿರೂಪಿಸಿರುವ ಆದರ್ಶಗಳನ್ನೂ, ಹಾಕಿಕೊಟ್ಟಿರುವ. ದಾರಿಯನ್ನೂ ನಾವು ಮರೆಯುವಂತಿಲ್ಲ; ಮರೆಯಬಾರದು.